ಹಾಸ್ಯ

# ಏರುವ ಬಾರಾ ಬಾರಾ

ಯಾವುದೇ ಸಮಯದಲ್ಲಿ ಬಸ್ ನಿಲ್ದಾಣದಲ್ಲಿ ಕಾಲಿಟ್ಟರೂ ನಮ್ಮಂತಹ ಶಕ್ತಿರೂಪಿಣಿಯರಿಂದ 24x7 ತುಂಬಿ ತುಳುಕುತ್ತಿರುತ್ತವೆ. ಕೆಂಪು ಬಸ್ಸುಗಳಲ್ಲಿ ಪುರುಷರು, ಖಾಸಗಿ ಬಸ್ಸುಗಳಲ್ಲಿ ಮಹಿಳೆಯರು ಅಲ್ಪಸಂಖ್ಯಾತರೆನ್ನಬಹುದು. ಶಕ್ತಿದೇವಿಯರ ಪವರ್‌ಗೆ ಅವರು ಶರಣಾಗಲೇಬೇಕು.

■ ನಳಿನಿ ಟಿ. ಭೀಮಪ್ಪ
ಕಲೆ: ಸಂತೋಷ್ ಸಸಿಹಿತ್ಲು

'ಮಮ್ಮೀ, ಎಲ್ಲ ಬಸ್‌ಗಳೂ ಬುಕ್ ಆಗಿವೆ, ಬೆಳಿಗ್ಗೆ ಹತ್ತು ಗಂಟೆಗೆ ಆಫೀಸ್ ಇದೆ. ಬೇಗ ಎಬ್ಬಿಸು ರೆಡ್ ಬಸ್‌ಗೆ ಹೋಗುತ್ತೇನೆ' ಎಂದು ಹೇಳುತ್ತಾ, ಗುಬ್ಬರ ಹಾಕಿದ ಚಾದರದೊಳಗಿನಿಂದ ಮಗಳ ಚಾದರವಾಣಿ ಮೊಳಗುತ್ತಿದ್ದಂತೆ, ಆಕಾಶವಾಣಿಯ ನುಡಿಯನ್ನು ಕೇಳಿ ಬೆಚ್ಚಿದ ಕಂಸನಂತಾಗಿ, 'ದಡ್' ಎಂದು ಎದ್ದು ಕೂತಿದ್ದೆ. ಚಿತ್ರದುರ್ಗದಿಂದ ಬೆಂಗಳೂರಿಗೆ ಮೂರು ತಾಸಿನ ಹಾದಿಯಾದ್ದರಿಂದ, ಹಿಂದೆಲ್ಲ ಆರು ಗಂಟೆಗೆ ಬಿಟ್ಟರೆ ಒಂಬತ್ತಕ್ಕೆ ಬೆಂಗಳೂರಿನಲ್ಲಿ ಲ್ಯಾಂಡ್ ಆಗುತ್ತಿದ್ದುದಿತ್ತು. ಈಗಲೂ ಅಷ್ಟೇ ಸಮಯವೇ, ಆದರೆ ಈಗ ಬಸ್ ಕ್ಯಾಚ್ ಮಾಡಲು 'ಶಕ್ತಿ' ಮೀರಿ ಪ್ರಯತ್ನಿಸಬೇಕಾದ ಯೋ(ಜ)ಚನೆಯಿಂದಲೇ, ತಲೆಕೆಟ್ಟು ಗೊಬ್ಬರವಾಗಿ ನಿದ್ರಾದೇವಿ ಕೈಕೊಟ್ಟು, ಗಡಿಯಾರದ ಗಂಟೆಗಳನ್ನು ಎಣಿಸುತ್ತಾ, ಉದ್ದಿನ ಮೂಟೆಯಂತೆ ಹೊ(ಉ)ರಳಾಡಿದ್ದಾಯಿತು.

ಹಾಗೆ ನೋಡಿದರೆ ಕೆಂಪು ಬಸ್ ಚಿಕ್ಕಂದಿನಿಂದಲೂ ನನ್ನ ಪ್ರಯಾಣದ ಆಪ್ತಸಂಗಾತಿ. ಎಂತೆಂತಹ ಆರಾಮದಾಯಕ, ವಾತಾನುಕೂಲಿತ ಬಸ್ಸುಗಳ ಅವತಾರಗಳ ಉಗಮವಾದರೂ, ಕೆಂಪು ಬಸ್ಸೇ ನನ್ನ ಪ್ರಥಮ ಆಯ್ಕೆ. ಆಗೆಲ್ಲ ಬಸ್‌ಗೆ ಹೋಗುವುದೆಂದರೆ ಯಾವುದೇ ಧಾವಂತ ಇರುತ್ತಿರಲಿಲ್ಲ. ಆರಾಮವಾಗಿ ತಿಂದು, ಉಂಡು, ನಮಗನುಕೂಲಕರ ಸಮಯದಲ್ಲಿ ಬಸ್‌ಸ್ಟ್ಯಾಂಡ್‌ಗೆ ತಮ್ಮನೊಂದಿಗೆ ಹಾಜರಾಗುತ್ತಿದ್ದೆ. ನಿಲ್ದಾಣದಲ್ಲಿ ಖಾಲಿ ಇರುತ್ತಿದ್ದ ಸೀಟುಗಳಲ್ಲಿ ಮತ್ತೊಂದಿಷ್ಟು ಸಮಯ ಕುಳಿತುಕೊಂಡು, ಹರಟೆ ಹೊಡೆಯುತ್ತಿದ್ದೆ. ನಮ್ಮದೇ ಊರಿನ ಬಸ್ ಬಂದರೂ, ಕುಳಿತುಕೊಳ್ಳುವ ಸೀಟು ತುಂಬಿದರೂ, ನಿಲ್ಲುವ ಶ್ರಮ ನೆನೆಸಿಕೊಂಡು, 'ಇದ್ಯಾಕೋ

